**ದಿನಾಂಕಃ 24/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ. ಐ.ಆರ್.ಎಸ್.,ವಕೀಲರಿಂದಃ**

1. ಸಾಕ್ಷಿಗೆ ಈ ದಿನ ದಾವಾ ಸ್ವತ್ತಿನ ಪೋಟೊ ಎಂದು ತೋರಿಸಿದಾಗ, ಅವರು ಇಲ್ಲ ಎಂದು ನುಡಿಯತ್ತಾರೆ. ಆದ್ದರಿಂದ ಅದನ್ನು ನಿಶಾನೆಗೊಳಿಸಲ್ಲಿಲ್ಲ. ಸಾಕ್ಷಿಗೆ ಈ ದಿನ ಒಂದು ಪೋಟೊ ಎಂದು ತೋರಿಸಿದಾಗ, ಟ್ರ್ಯಾಕ್ಟರ ಇರುವ ಜಮೀನು ಸ.ನಂ. 30 ಕ್ಕೆ ಸಂಬಂಧಿಸಿದ್ದು, ಖಾಲಿ ಇರುವ ಜಮೀನು ಸ.ನಂ. 32/2 ಕ್ಕೆ ಸಂಬಂಧಿಸಿದ್ದು ಎಂದು ನುಡಿದಿದ್ದು, ಅದನ್ನು **ನಿಪಿ.22** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಪೋಟೊವನ್ನು ತೋರಿಸಿ, ಸದರಿ ಬೇಳೆ ಯಾವ ಸ.ನಂ. ರಲ್ಲಿ ಇದೆ ಎಂದರೆ , ಸಾಕ್ಷಿಯ ವಾದಿಗಳ ಸ.ನಂ. 30 ಎಂದು ನುಡಿದಿದ್ದು, ಸದರಿ ಪೋಟೊವನ್ನು **ನಿಪಿ.23** ಎಂದು ಗುರುತಿಸಲಾಯಿತು.

2. ಈ ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ವಾದಿಗಳ ಮೇಲೆ 2016 ರಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ಸಾಕ್ಷಿದಾರನಾಗಿಲ್ಲ. ನಿಡಿ.1 ರಿಂದ 3 ರ ಕ್ರಯಪತ್ರಗಳು ಬೇರೆ ಬೇರ ದಿನ ನೊಂದಣಿ ಯಾಗಿವೆ. ಮೊದಲನೇ ಕ್ರಯ ಪತ್ರ ದಿಃ 10.11.2014 ರಂದು 34 ಗುಂಟೆ ಜಮೀನಿಗೆ ಸಂಬಂಧಿಸಿದಂತೆ, ಎರಡೇಯ ಕ್ರಯ ಪತ್ರ ದಿಃ 22.02.2016 ರಂದು 35 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮತ್ತು ಮೂರನೆಯ ಕ್ರಯ ಪತ್ರ ದಿಃ 22.02.2016 ರಂದು 34 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನೋಂದಣಿಯಾಗಿವೆ. ದಿಃ 10.11.2014 ರ ಕ್ರಯಪತ್ರಕ್ಕೆ ದಿವಾಕರ, ಸಿದ್ದೇಗೌಡ, ಮಹಾದೇವ ರವರು ಸಾಕ್ಷಿದಾರಾಗಿದ್ದಾರೆ. ಸದರಿ ಕ್ರಯಪತ್ರದ ಚಕ್ಕುಬಂದಿ ಪೂರ್ವಕ್ಕೆಃ ರಾಜಶೇಖರ ರವರ ಸ.ನಂ.32/4 ರ ಜಮೀನು. ಸದರಿ ರಾಜಶೇಖರ ಎಂದರೆ ನಾನೇ. ಪಶ್ಚಿಮಕ್ಕೆ ಚಂದ್ರಮ್ಮ ರವರ ಜಮೀನು, ಉತ್ತರಕ್ಕೆ ಸ.ನಂ. 32/1 ರ ಸರ್ವಮಂಗಳ ರವರ ಜಮೀನು ಮತ್ತು ದಕ್ಷಿಣಕ್ಕೆ ಪುಟ್ಟಣ್ಣಯ್ಯ ರವರ ಜಮೀನು ಇದೆ. ಪುಟ್ಟಣಯ್ಯ ರವರಿಗೆ ಸ.ನಂ. 22/3 ರಲ್ಲಿ

ಜಮೀನು ಇದೆ. ನಿಡಿ.1 ರ ಚೆಕ್ಕುಬಂದಿಯನ್ನು ಸರ್ವೆ ಮಾಡಿ ನೀಡಿದ್ದೇವು. ಸದರಿ ಸರ್ವೇಯ ಕಾಲಕ್ಕೆ ಮಾಡಿಸಿದ ನಕಾಶೆಯನ್ನು ನೀಡಿದ್ದೇವೆ.

3. ನಿಡಿ.2 ರ ಕ್ರಯಪತ್ರಕ್ಕೆ ಸಾಕ್ಷಿದಾರರಾಗಿ ಶಶೀಧರ ಮತ್ತು ಜಿ.ಎಸ್.ರವಿ ರವರು ಸಹಿಯನ್ನು ಮಾಡಿದ್ದಾರೆ. ಸದರಿ ರವರು ನೀಲವಾಡಿ ಮತ್ತು ಗೊರಹಳ್ಳಿ ಗ್ರಾಮದವರು. ಸದರಿ ಕ್ರಯಪತ್ರಕ್ಕೆ ಚಿಕ್ಕನೇರಳೆ ಗ್ರಾಮದವರು ಯಾರು ಸಿಗಲಿಲ್ಲ. ಸದರಿ ಕ್ರಯ ಪತ್ರದ ಸ.ನಂ. 32/2 ರ ಚಕ್ಕುಬಂದಿ. ಪೂರ್ವಕ್ಕೆ ಃ ಚಂದ್ರಮ್ಮ ರವರ ಜಮೀನು, ಪಶ್ಚಿಮಕ್ಕೆ ಃ ಸ್ವಾಮಯ್ಯ ರವರ ಜಮೀನು, ಉತ್ತರಕ್ಕೆಃ ಸರ್ವಮಂಗಳ ರವರ ಜಮೀನು ಮತ್ತು ದಕ್ಷಿಣಕ್ಕೆ ಪುಟ್ಟಣ್ಣಯ್ಯ ರವರ ಜಮೀನು ಇದೆ.

4. ನಿಡಿ.3 ರ ಕ್ರಯಪತ್ರದ ಸ.ನಂ. 32/3 ಆಗಿದ್ದು, ಅದಕ್ಕೆ ಶಶಿಧರ ಮತ್ತು ಜಿ.ಎಸ್. ರವಿ ರವರು ಸಾಕ್ಷಿದಾರರಾಗಿದ್ದಾರೆ. ಸದರಿ ಕ್ರಯಪತ್ರದ ಚಕ್ಕುಬಂದಿಃ ಪೂರ್ವಕ್ಕೆಃ ಜವರಮ್ಮ ರವರ ಜಮೀನು, ಪಶ್ಚಿಮಕ್ಕೆ ಃ ಸ್ವಾಮಯ್ಯ ರವರ ಜಮೀನು, ಉತ್ತರಕ್ಕೆ ಃ ಸರ್ವಮಂಗಳ ರವರ ಜಮೀನು ಮತ್ತು ದಕ್ಷಿಣಕ್ಕೆ ಃ ಪುಟ್ಟಣ್ಣಯ್ಯ ರವರ ಜಮೀನು ಇದೆ. ನಿಡಿ.1 ರಿಂದ 3 ರಲ್ಲಿರುವ ಜಮೀನುಗಳು ಬೇರೆ ಬೇರೆ ಚಕ್ಕುಬಂದಿಯಲ್ಲಿರುವ ಜಮೀನುಗಳು ಎಂದರೆ ಸರಿ.

5. ಪೂರ್ವಕ್ಕೆಃ ಚಂದ್ರಮ್ಮ ರವರ ಜಮೀನು, ಪಶ್ಚಿಮಕ್ಕೆಃ ಸ್ವಾಮಯ್ಯ ರವರ ಜಮೀನು, ಉತ್ತರಕ್ಕೆ ಃ ಸರ್ವಮಂಗಳ ರವರ ಜಮೀನು ಮತ್ತು ದಕ್ಷಿಣಕ್ಕೆಃ ಪುಟ್ಟಣ್ಣಯ್ಯ ರವರ ಜಮೀನು ಇರುವ ಚಕ್ಕುಬಂದಿ ಸ.ನಂ. 32/4 ಕ್ಕೆ ಸಂಬಂಧಿಸಿದ್ದು. ಸ.ನಂ.32/3 ಮತ್ತು 32/4 ರ ಒಂದೇ ಚಕ್ಕುಬಂದಿಯಲ್ಲಿ ಇವೆ ಎಂದರೆ ಸರಿಯಲ್ಲ. ಈ ಹೇಳಿದ ಚಕ್ಕುಬಂದಿಯಲ್ಲಿ ವಾದಿಗಳು ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ.

6. ನಿಡಿ.1 ರಿಂದ 3 ರ ಕ್ರಯಪತ್ರದ ಜಮೀನುಗಳ ವ್ಯವಹಾರ ಪತ್ರ ಬರಹಗಾರರ ಸಮಕ್ಷಮ ನಡೆಯಿತು. ಈ ಎಲ್ಲಾ ಕ್ರಯಪತ್ರದ ಮಾತುಕತೆ ಬೇರೆ ಬೇರ ದಿನ ನಡೆಯಿತು. ನಿಡಿ.1 ರ ಒಂದು ವಾರದ ಮುಂಚೆ ಮಾತುಕತೆ ನಮ್ಮ ಊರಿನ ಯಜಮಾನರಾದ ಜ್ಯೋತಿ ಕುಮಾರ ಮತ್ತು ನಾಗೇಂದ್ರರವರ ಮನೆಯಲ್ಲಿ ನಡೆಯಿತು.

ಸದರಿ ರವರು ನಮ್ಮ ಗ್ರಾಮದ ಯಜಮಾನರು. ಅವರನ್ನು ಹೊರತು ಪಡಿಸಿ ಬೇರೆ ಯಾರು ಯಜಮಾನರು ಇಲ್ಲ. ಯಜಮಾನರ ಸಮ್ಮುಖದಲ್ಲಿ ನಾನು ಮುಂಗಡವಾಗಿ ರೂ. 50,000/- ಗಳನ್ನು ನೀಡಿದ್ದೆ. ಅದಕ್ಕೆ ಯಜಮಾನರೇ ಸಾಕ್ಷಿದಾರರು. ಮುಂಗಡವಾಗಿ ನೀಡಿದ ಹಣಕ್ಕೆ ಪತ್ರವನ್ನು ಬರೆಸಿಲ್ಲ. ಸದರಿ ಮುಂಗಡ ಹಣವನ್ನು ದಿಃ 10.11.2014 ರ ಕ್ರಯ ಪತ್ರದಲ್ಲಿ ತೋರಿಸಿಲ್ಲ. ಅದಕ್ಕೆ ಮಧುಕುಮಾರವರು ಪತ್ರ ಬರಹಗಾರರು. ಮಧುಕುಮಾರ ರವರ ಕಚೇರಿ ಪಿರಿಯಾಪಟ್ಟಣದ ತಾಲ್ಲೂಕಾ ಕಚೇರಿಯ ಹತ್ತಿರ ಇದೆ. ನಾವು ಅಲ್ಲಿಗೆ ಬಂದಿದ್ದೇವು. ನಾವು, ನಾಗೇಗೌಡ, ಹರೀಶ ಮತ್ತು ಸಾಕ್ಷಿದಾರರಾದ ದಿವಾಕರ, ಸಿದ್ದೇಗೌಡ, ಮಹಾದೇವ ರವರು ಬಂದಿದ್ದೇವು. ಸದರಿ ವ್ಯವಹಾರವು ರೂ.1,05,000 ಕ್ಕೆ 34 ಗುಂಟೆಗೆ ಆಯಿತು. ಆ ಸಮಯದಲ್ಲಿ ಇದ್ದ ಮಾರುಕಟ್ಟೆ ಬೆಲೆಗೆ ಕ್ರಯಪತ್ರವನ್ನು ಬರೆಸಿ, ಖರೀದಿಸಲಾಯಿತು. ನೋಂದಾಣಾಧಿಕಾರಿಯವರ ಕಚೇರಿಯಲ್ಲಿ ನಿಡಿ.1 ಕ್ಕೆ ಸಹಿ ಮಾಡಲಾಯಿತು. ಆಗ ನಾಗೇಗೌಡ ರವರ ಮೊದಲು ಕನ್ನಡದಲ್ಲಿ ಸಹಿಯನ್ನು ಮಾಡಿದ್ದರು, ಸಾಕ್ಷಿದಾರರು ಸಹ ಕನ್ನಡದಲ್ಲಿ ಸಹಿಯನ್ನು ಮಾಡಿದ್ದಾರೆ. ಮಾತುಕತೆಯ ಸಮಯದಲ್ಲಿ ವಾದಿಗಳು ಇರಲಿಲ್ಲ.

7. ದಾವಾ ಸ್ವತ್ತುಗಳು ವಾದಿಗಳ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದು ನಾಗೇಗೌಡ ರವರ ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ನಾಗೇಗೌಡ ರವರ ಅವರ ಹೆಂಡತಿಗೆ ಹುಷಾರು ಇಲ್ಲದ ಕಾರಣ, ಅವರು ಹೆಂಡತಿಯ ವೈದ್ಯಕೀಯ ಖರ್ಚಿಗೆ ಈ ಜಮೀನನ್ನು ಮಾರಾಟ ಮಾಡಲಾಯಿತು. ಕ್ರಯಪತ್ರದಲ್ಲಿ ಅವರ ಹೆಂಡತಿಯ ವೈದ್ಯಕೀಯ ಖರ್ಚಿಗೆ ಎಂದು ಬೆರದಿಲ್ಲ. ಯಾವ ಉದ್ದೇಶಕ್ಕೆ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಡಿ.2 ರಲ್ಲಿ ತಮ್ಮ ದರದ್ದು ಎಂದು ಬರೆಯಲಾಗಿದೆ. ನಿಡಿ.3 ರಲ್ಲಿ ಅವರ ಕೈ ಸಾಲವನ್ನು ತೀರಿಸಲು ಎಂದು ಬರೆಯಲಾಗಿದೆ. ನಿಡಿ.2 ಮತ್ತು 3 ರ ವ್ಯವಹಾರಗಳನ್ನು ಜ್ಯೋತಿಕುಮಾರ ರವರ ಮನೆಯಲ್ಲಿ ಸಣ್ಣಸ್ವಾಮಿ ರವರ ಸಮಕ್ಷಮದಲ್ಲಿ ಮಾಡಲಾಯಿತು. ನಿಡಿ.2 ಮತ್ತು 3 ರ ವ್ಯವಹಾರವನ್ನು

ಸ.ನಂ.32/2ರ ಜಮೀನನ್ನು ರೂ. 1,37,000/-ಕ್ಕೆ ಮತ್ತು ಸ.ನಂ. 32/3ರ ಜಮೀನನ್ನು ರೂ. 1,33,000/- ಕ್ಕೆ ವ್ಯವಹಾರವನ್ನು ಮಾಡಲಾಯಿತು. ಸದರಿ ಜಮೀನುಗಳನ್ನು ಆವಾಗ ಇದ್ದ ಸರ್ಕಾರಿ ಬೆಲೆಗೆ ಕ್ರಯಪತ್ರವನ್ನು ಬರೆಯಲಾಯಿತು. ನಿಡಿ.1 ರಿಂದ 3 ರವರ ವ್ಯಾಪಾರಸ್ಥರು ಒಂದೇ ಕುಟುಂಬದವರು. ಅಂದರೆ ಎರಡು ಜನ ಮೈದುನ ಮತ್ತು ಒಬ್ಬ ಅತ್ತಿಗೆ. ಅವರ ವಂಶವೃಕ್ಷವನ್ನು ನಾನು ನೋಡಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿದು ಎಂದು ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಈ ಕ್ರಯಪತ್ರದಂತೆ ಖಾತೆಯಾಗಿಲ್ಲ. ಕಾರಣ ವಾದಿಗಳು ತಕರಾರು ಮಾಡಿದ್ದಾರೆ. ವಾದಿಗಳು ಈ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು, ಇದನ್ನು ಮಾರಾಟ ಮಾಡಿದ್ದಾರೆ ಎಂದು ತಕರಾರನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ವಾದಿಗಳು ಸ್ವಾಧೀನದಲ್ಲಿರುವ ಜಮೀನುಗಳಿಗೆ ನಾವು ತಂಟೆ ತಕರಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಸಂಬಂಧ ಊಳಿಕೆ ಪ್ರತಿವಾದಿಗಳು ದಾವಾ ಸ್ವತ್ತಿನ ಸಂಬಂಧ ಸಿ.ಸಿ. 387/2019 ರಂತೆ ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂದರೆ, ಸರಿ. ಸದರಿ ಪ್ರಕರಣದಲ್ಲಿ ನಾನು ಸಾಕ್ಷಿದಾರನಾಗಿದ್ದೇನೆ ಎಂದರೆ ಸರಿಯಲ್ಲ. ನಿಡಿ.1 ರಿಂದ 3 ರ ಕ್ರಯಪತ್ರಗಳನ್ನು ಉಳಿಕೆ ಪ್ರತಿವಾದಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಕ್ರಯಪತ್ರಗಳ ಬಗ್ಗೆ ಯಾವುದೇ ಮಾತುಕತೆ ಯಾಗಿಲ್ಲ ಮತ್ತು ಯಾವುದೇ ಹಣದ ವ್ಯವಹಾರ ಆಗಿಲ್ಲ ಹಾಗೂ ಸುಳ್ಳು ಕ್ರಯಪತ್ರಗಳು ನೋಂದಣಿಯಾಗಿವೆ ಎಂದರೆ ಸರಿಯಲ್ಲ. 1 ರಿಂದ 10 ನೇ ಪ್ರತಿವಾದಿಗಳು ಸುಳ್ಳು ದಾಖಲೆಗಳ ಮುಖಾಂತರ ನನಗೆ ವರ್ಗಾವಣೆ ಯಾಗಿವೆ ಎಂದರೆ ಸರಿಯಲ್ಲ. ವಾದಿಗಳ ಪಿತ್ರಾರ್ಜಿತ ಸ್ವತ್ತುಗಳನ್ನು ಲಪಟಾಯಿಸಲು ಯಾವುದೇ ಹಣದ ವ್ಯವಹಾರ ಮಾಡದಿದ್ದರೂ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಒಂದೇ ಚಕ್ಕುಬಂದಿಯಲ್ಲಿ ಇವೆ ಎಂದರೆ ಸರಿಯಲ್ಲ. ನಾನು ಯಾವುದೇ ಸರ್ವೇ ದಾಖಲೆಯನ್ನು ಮತ್ತು ಮೂಲ ದಾಖಲಾತಿಗಳನ್ನು ಹಾಗೂ ವಿಭಾಗ ಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಉಳಿಕೆ ಪ್ರತಿವಾದಿಗಳು ಸತ್ಯಾಂಶ ಹೊರಬರುತ್ತದೆ ಎಂದು

ಯಾವುದೇ ದಾಖಲಾತಿಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ತೊಂದರೆಯನ್ನು ನೀಡಲು, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿಯನ್ನು ನುಡಿದು, ಸುಳ್ಳು ದಾಖಲೆಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**